ಯಾರಾದರೂ ಏಕೆ ಹೇಳುತ್ತಾರೆ ಅದು ಕೋಡ್‌ವರ್ಡ್ ಎಂಬ ಅನುಮಾನ ಬಂತು. ಪಬ್ಲಿಕ್ ಫೋನ್‌ನಿಂದ ಖಾನ್‌ಗೆ ಕಾಲ್ ಮಾಡಿ ನಾನು ಅದೇ ಮಾತು ಹೇಳಿದೆ. ಆಗ ಅವನು ಆ ಬದಿಯಿಂದ 'ಜಹನ್ನಂ ಆತಂಕವಾದಿ' ಎಂದನು. ವಿಚಾರಣೆ ಮಾಡಿದಾಗ ಆ ನಂಬರ್ ಸಿ.ಬಿ.ಐ.ದು ಎಂದು ತಿಳಿಯಿತು. ಆ ಕೋಡ್ ಆಧಾರವಾಗಿ ಮತ್ತೆ ಸಿ.ಬಿ.ಐ.ಗೆ ಫೋನ್ ಮಾಡಿದೆ, ನಾನೇ ಖಾನ್ ಎಂದುಕೊಂಡು 'ಪೀರ್‌ಗೂಡ ಮತ ಕಲಹಗಳ' ಬಗ್ಗೆ ಇನ್ನಷ್ಟು ವಿವರಗಳು ಬೇಕು ಎಂದು ಹೇಳಿದರು. ಆಗ ನನಗೆ ಈ ಖಾನ್ ಒಬ್ಬ ಪೊಲೀಸ್ ಇನ್ಫಾರ್ಮರ್ ಎಂದು ಕನ್‌ಫರ್ಮ್ ಆಯಿತು' ಎಂದನು ಮಿಜ್ರಾಡಿನ್.

ಹೊಸದಾಗಿ ಸೇರಿದ್ದ ಇಬ್ಬರು ಯುವಕರು ಆಶ್ಚರ್ಯದಿಂದ ಮಿಜ್ರಾಡಿನ್ ಕಡೆ ನೋಡುತ್ತಿದ್ದರು.

'ಈಗ ಏನು ಮಾಡೋಣ ಭಾಯ್?'

'ಶಾಲಾ ಮಕ್ಕಳಿಗೋಸ್ಕರ ಖಾನ್ ನಾಳೆ ರಾತ್ರಿ ಸದ್ಭಾವನಾ ಸಭೆ ಏರ್ಪಾಡು ಮಾಡಿದ್ದಾನೆ'

'ಏತಕ್ಕೆ?'

ಮಿಜ್ರಾಡಿನ್ ನಕ್ಕನು. 'ಮತ ಸಾಮರಸ್ಯಗಳ ಬಗ್ಗೆ ಮಕ್ಕಳಿಗೆ ಹೇಳಿದರೆ ಅವರು ಉಗ್ರವಾದಿಗಳಾಗುವುದಿಲ್ಲವಂತೆ'

'ಸಣ್ಣ ಮಕ್ಕಳಿಗೆ ಜಾತಿ? ಮತ ಇವೆಲ್ಲ ಅರ್ಥವಾಗುತ್ತದೇನು?'

'ನಾನು ಕೂಡ ಇದೇ ಪ್ರಶ್ನೆ ಕೇಳಿದೆ. ಸಣ್ಣ ವಯಸ್ಸಿನಲ್ಲೇ ಅವರ ಮನಸ್ಸಿನಲ್ಲಿ ಇಂತಹ ಭಾವನೆ ನಾಡಿ ಮಾಡಿದರೆ ಮುಂದೆ ಅದು ಬೆಳೆದು ಮಹಾವೃಕ್ಷವಾಗುತ್ತದೆ' ಎಂದನು... ಮೂರ್ಖ. ಕಾಶ್ಮೀರ್ ಬಗ್ಗೆ ಅವನಿಗೆ ತಿಳಿದಿಲ್ಲ. ಬೀಜ ಮೊಳೆಯ ಬೇಕೆಂದರೆ ಭೂಮಿ ಫಲವತ್ತಾಗಿ ಇರಬೇಕು. ನೀರು ಹರಿಯಬೇಕು. ಬಂದೂಕು ಶಬ್ದ ಇದ್ದಲ್ಲಿ ನೀರು ಪ್ರವಹಿಸುವುದಿಲ್ಲ, ರಕ್ತ ಹರಿಯುತ್ತದೆ'

ಕೇಳುತ್ತಿದ್ದ ಯುವಕರು ಆವೇಶದಿಂದ ಮುಷ್ಟಿ ಬಿಗಿ ಮಾಡಿದರು.

'ಅವನ ಸಭೆಗಳಿಗೆ ಹಿಂದೂ ಗುರುಗಳು, ಮುಸ್ಲಿಂ ಮೌಲ್ವಿಗಳು ಬರುತ್ತಾರೆಂದು ಹೇಳಿದ. ಖಚಿತವಾಗಿ ಅವರಲ್ಲಿ ಅವನ ಸ್ನೇಹಿತರಾದ ಇನ್ಫಾರ್ಮರ್‌ಗಳು ಕೂಡಾ ಇರುತ್ತಾರೆ. ಆ ಸಮಯದಲ್ಲಿ ಆಡಿಟೋರಿಯಂನಲ್ಲಿ ಬಾಂಬ್ ಸಿಡಿಸಿದರೆ ನಮ್ಮ ಕೆಲಸ ಪೂರ್ತಿಯಾದ ಹಾಗೇನೇ. ಇದು ನನ್ನ ಪ್ಲಾನ್, ಹೇಗಿದೆ?'

ಕರ್ನಲ್ ಹೇಳಿದ ಮೇಲೆ ಬೇಡ ಅನ್ನುವವರು ಯಾರು? ಎಲ್ಲರೂ ತಲೆಯಾಡಿಸಿದರು. ಆದರೆ ಅಮೀರ್‌ನ ಕಣ್ಣಲ್ಲಿದ್ದ ಸಂದಿಗ್ಧತೆಯನ್ನು ಮಿಜ್ರಾಡಿನ್ ಗುರುತಿಸಿದನು. ಹತ್ತಿರಕ್ಕೆ ಕರೆದು ಹೆಗಲ ಮೇಲೆ ಕೈ ಹಾಕಿದನು. 'ಬ್ಲಾಸ್ಟ್‌ನಲ್ಲಿ ಕೆಲ ಸಣ್ಣ ಮಕ್ಕಳು ಸಾಯುತ್ತಾರೆ. ಅದೇ ಅಲ್ಲವೇ ನಿನ್ನ ಅನುಮಾನ?... ಬೇಟಾ, ಮೈಯಲ್ಲಿರುವ ನೀರಿಗಾಗಿ ಮರಳುಗಾಡಿನಲ್ಲಿ ಒಂಟೆಯನ್ನು ಸಾಯಿಸಿದಾಗ ಅದು ದುಃಖಪಡುವುದಿಲ್ಲ, ಸಂತೋಷದಿಂದಲೇ ಸಾಯುತ್ತದೆ. ತಾನು ಸೃಷ್ಟಿಯಾಗಿರುವುದು ಮನುಷ್ಯನ ಸಲುವಾಗಿ ಎನ್ನುವುದು ಅದಕ್ಕೆ ತಿಳಿದಿದೆ. ಮಕ್ಕಳು ಕೂಡ ಹಾಗೆಯೇ ಸಾಯುತ್ತಾರೆ, ಸಾಯಲಿ ಬಿಡು. ಅವರು ಅದೃಷ್ಟವಂತರು. ಮತಕ್ಕೋಸ್ಕರ ತ್ಯಾಗ ಮಾಡಿದ ಮಕ್ಕಳನ್ನು ಸ್ವರ್ಗದಲ್ಲಿ ಆ ಪ್ರವಾದಿಯೇ ಕೈಚಾಚಿ ಸ್ವಾಗತಿಸುತ್ತಾನೆ'

ಸಂದಿಗ್ಧದಲ್ಲಿರುವ ಯುವಕರ ಮನಸ್ಸನ್ನು ಟೆರರಿಸಂ ಕಡೆಗೆ ಹೇಗೆ ಹೊರಳಿಸಬಹುದೆನ್ನುವುದು ಅವನಿಗೆ ಚೆನ್ನಾಗಿ ತಿಳಿದಿತ್ತು. ಆ ಯುವಕನನ್ನು ಉದ್ದೇಶಿಸಿ ಮಾತು ಮುಂದುವರೆಸಿದನು.

'ಹೈದ್ರಾಬಾದ್‌ನ ಮೆಕ್ಕಾ ಮಸೀದಿ ಬ್ಲಾಸ್ಟ್ ಆದಾಗ ನಿನಗೆ ಬಹುಶಃ ಹತ್ತು ವರ್ಷ. ಆದಿನ ಶುಕ್ರವಾರ. ನಾನೂ ಅಲ್ಲಿಯೇ ಇದ್ದೆ. ನಮಾಜ್‌ಗಾಗಿ ಸುಮಾರು ಹತ್ತು ಸಾವಿರ ಮಂದಿ ಬಂದರು. ಭಕ್ತರು ದೇಹಶುದ್ಧಿ ಮಾಡಿಕೊಳ್ಳುವ ಉಜೂರ್‌ಖಾನಾ ಬಳಿ ಬ್ಲಾಸ್ಟ್ ಆಯಿತು. ಬಾಂಬನ್ನು ಕಲ್ಲಿನ ಕೆಳಗೆ ಇಟ್ಟಿದ್ದರು. ಅದು ಅದೃಷ್ಟ. ಇಲ್ಲದಿದ್ದರೆ ನಮ್ಮವರು ಸಾವಿರಾರು ಮಂದಿ ಸತ್ತಿರುತ್ತಿದ್ದರು. ಆದರೂ ಸತ್ತವರ ಸಂಖ್ಯೆ ದೊಡ್ಡದೇ. ನಿನಗೆ ಗೊತ್ತಾ ಅಮೀರ್? ಆ ಬಾಂಬ್ ಸಿಡಿಸಿದವರನ್ನು ಮೊನ್ನೆ ಮೊನ್ನೆ ನಿರ್ದೋಷಿಗಳೆಂದು ಕೋರ್ಟ್ ಬಿಡುಗಡೆ ಮಾಡಿತು. ಈ ದೇಶದಲ್ಲಿ ನಮ್ಮ ಧರ್ಮದವರಿಗೆ ನ್ಯಾಯ ಸಿಗುವುದಿಲ್ಲ ಎನ್ನುವುದಕ್ಕೆ ಇದಕ್ಕಿಂತ ನಿದರ್ಶನ ಬೇಕೇ? ಇಂತಹ ಅನ್ಯಾಯವನ್ನು ಎದುರಿಸುವುದಕ್ಕೇ ನಮ್ಮ ಯುದ್ಧ. ಮತವನ್ನು ರಕ್ಷಿಸುವುದಕ್ಕೆಂದೇ ಭಗವಂತನು ನಮ್ಮನ್ನು ಸೃಷ್ಟಿ ಮಾಡಿದ್ದಾನೆ. ಕೋಟೆಯನ್ನು ರಕ್ಷಿಸುವುದಕ್ಕೆ ಶತ್ರು ಸೈನಿಕರನ್ನು ಸಾಯಿಸುತ್ತಾನೆ ವೀರನಾದವನು ಶತ್ರುವಿಗೆ ಮದುವೆಯಾಗಿದೆಯೇ, ಮಕ್ಕಳಿದ್ದಾರೆಯೇ ಎಂದು ಯೋಚಿಸುವುದಿಲ್ಲ.... ನಾವು ನಮ್ಮ ಕರ್ತವ್ಯ ಮಾಡಬೇಕು ಅಷ್ಟೇ'.

ಯುವಕರು ಉದ್ವೇಗದಿಂದ 'ಜಿಹಾದ್... ಜಿಹಾದ್' ಎಂದು ಕಿರುಚಿದರು.

ಮಿಜ್ರಾಡಿನ್ ಸೀನಿಯರ್‌ನ ಕಡೆ ತಿರುಗಿ 'ಆರ್.ಡಿ.ಎಕ್ಸ್. ಇದೆಯಾ?' ಎಂದು ಕೇಳಿದನು.

'ಇದೆ ಭಾಯ್'

ಮಿಜ್ರಾಡಿನ್ ಕಿರಿಯರ ಕಡೆ ತಿರುಗಿ' ನಿಮಗೆ ಆರ್.ಡಿ.ಎಕ್ಸ್. ಅಂದರೇನು ಗೊತ್ತಾ?' ಎಂದು ಕೇಳಿದನು.

'ಬಾಂಬ್‌ನಲ್ಲಿ ಬಳಸುವುದು' ಎಂದು ಉತ್ತರಿಸಿದರು.

'ನಿಜ, ಆದರೆ ಅದರ ನಿಜವಾದ ಹೆಸರು 'ರಿಸರ್ಚ್ ಡಿಪಾರ್ಟ್‌ಮೆಂಟ್ ಎಕ್ಸ್‌ಪ್ಲೋಸಿವ್. ಪ್ರಯೋಗ ಶಾಲೆಯಲ್ಲಿ ಬಳಸುತ್ತಾರೆ! ಸರ್ಕಾರಗಳು ಆ ಹೆಸರಿಟ್ಟಿದ್ದಾರೆ. ನಾವು ಬಳಸಿದರೆ ಬಾಂಬು. ಅವರು ಬಳಸಿದರೆ ಪ್ರಯೋಗ' ಬಹಳ ಹೊತ್ತಿನ ನಂತರ ಮೊದಲ ಬಾರಿಗೆ ನಕ್ಕನು. 'ನಾಳೆ ನನ್ನ ಜೊತೆ ಆಡಿಟೋರಿಯಂಗೆ ಅಮೀರ್ ಬರುತ್ತಾನೆ. ಬಾಂಬ್ ಅವನೇ ಇಡುತ್ತಾನೆ. ಉಳಿದಿದ್ದು ನಾನು ನೋಡಿಕೊಳ್ಳುತ್ತೇನೆ. ಖುದಾ ಹಾಫೀಸ್'.

***

ಮರುದಿನ ರಾತ್ರಿ ಆಡಿಟೋರಿಯಂನಲ್ಲಿ ಆದ ಬ್ಲಾಸ್ಟ್‌ನಲ್ಲಿ ಇಪ್ಪತ್ತೈದು ಮಂದಿ ಸತ್ತರು, ನೂರಾರು ಮಂದಿ ಗಾಯಗೊಂಡರು.

ಮಿಜ್ರಾಡಿನ್, ಗಫಾರ್‌ಖಾನ್ ಇಬ್ಬರೂ ಅದೃಶ್ಯರಾದರು.

ಗಫಾರ್‌ಖಾನ್ ಪಾಕಿಸ್ತಾನ್‌ಗೆ ಓಡಿ ಹೋದನೆಂದು ಕೆಲ ಪೇಪರ್‌ಗಳು ಬರೆದರೆ, ಇನ್ನು ಕೆಲ ಪತ್ರಿಕೆಗಳು ಕಾಶ್ಮೀರ್‌ಗೆ ಹೋಗಿ ಉಗ್ರವಾದಿಗಳ ಜೊತೆ ಇದ್ದಾನೆ ಎಂದು ಬರೆದವು. ಅವನ ಕೃತ್ಯವನ್ನು ರಾಜಕೀಯ ಪಕ್ಷಗಳು ಕಟುವಾಗಿ ಖಂಡಿಸಿದವು. ಚಾನೆಲ್ಸ್‌ಗಳು ವಿಷಯ ಗೊತ್ತೇ ಇದೆಯಲ್ಲ, ತುಂಡಾಗಿ ಬಿದ್ದಿದ್ದ ಕೈಗಳನ್ನು, ಮಕ್ಕಳ ಕೈಗಳನ್ನು ದಿನಗಟ್ಟಲೆ ತೋರಿಸಿ ರೇಟಿಂಗ್ಸ್ ಬೆಳೆಸಿಕೊಂಡವು. ಖಾನ್ ಮನೆಯ ಮೇಲೆ ದಾಳಿಗಳು ನಡೆದವು. ಈ ಅವಮಾನ ಸಹಿಸಲಾಗದೆ ಅವನ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಳು.

ಒಂದ ಧರ್ಮದವರು ಆಯೋಜಿಸಿದ್ದ ಸಭೆಯಲ್ಲಿ ಆಗಿದ್ದಕ್ಕೆ ಬೇರೆ ಮತದವರು ಗಲಾಟೆ ಮಾಡಿದರು. ದಾರುಣವಾದ ಮಾರಣಹೋಮ ಪ್ರಾರಂಭವಾಯಿತು. ಮತ ಕಲಹಗಳು ಮುಗಿಲು ಮುಟ್ಟಿದವು.

ಗಲಾಟೆ ಕಡಿಮೆ ಮಾಡುವುದಕ್ಕೆ ಸರ್ಕಾರಕ್ಕೆ ಒಬ್ಬ ಸ್ಕೇಪ್‌ಗೋಟ್ ಬೇಕು. ಖಾನ್ ಮಗಳು ಕಲ್ಯಾಣಿಯನ್ನು ಅರೆಸ್ಟ್ ಮಾಡಿದರು.

—6—

'ಆಡಿಟೋರಿಯಂ ಬ್ಲಾಸ್ಟ್ ನಡೆದು ನಾಲ್ಕು ದಿನಗಳಾದವು. ಇಲ್ಲಿಯತನಕ ಖಾನ್ ಎಲ್ಲಿದ್ದಾನೋ, ಏನಾದನೋ ತಿಳಿದು ಬಂದಿಲ್ಲ' ಎಂದರು. ಸಿ.ಬಿ.ಐ. ಚೀಫ್ ಆಫೀಸರ್‌ಗಳು ಮಾತನಾಡಲಿಲ್ಲ.

'ಅವನ ಮಗಳ ಹೆಸರೇನು?'

'ಕಲ್ಯಾಣಿ'

'ಪ್ರಸ್ತುತ ಏನು ನಡೀತಿದೆ?'

'ಐ.ಐ.ಟಿ. ಪಾಸಾಗಿದೆ ಸರ್?'

ಚೀಫ್ ಕೋಪದಿಂದ 'ನಾನು ಕೇಳಿದ್ದು ಅದನ್ನಲ್ಲ.. ಇಂಟರಾಗೇಷನ್ ಎಲ್ಲಿಯವರೆಗೆ ಬಂದಿದೆ ಅಂತ' ಎಂದನು.

'ಕೃಷ್ಣ ಅವನನ್ನು ಗ್ರಿಲ್ ಮಾಡುತ್ತಿದ್ದಾನೆ ಸರ್'

'ಭಾಷೆ ತಿದ್ದಿಕೋ, ಹುಡುಗಿಯನ್ನು ಗ್ರಿಲ್ ಮಾಡುವುದು ಅಂದರೇನು? 'ಪ್ರಶ್ನಿಸುತ್ತಿದ್ದಾನೆ' ಅನ್ನು'

'ಸಾರಿ ಸರ್'

ಚೀಫ್ ನೋವಿನಿಂದ 'ತಾಯಿ ಸತ್ತು ಹೋದಳು, ಖಾನ್ ಏನಾದನೋ ಗೊತ್ತಿಲ್ಲ. ಜನರ ಒತ್ತಡ ತಾಳಲಾಗದೆ ಅರೆಸ್ಟ್ ಮಾಡಿದ್ದೇವೆ' ಎಂದರು.

'ಕಾಶ್ಮೀರ್‌ಗೆ ಓಡಿ ಹೋಗಿದ್ದಾನೆ ಅಂತಿದ್ದಾರೆ ಸರ್' ಇಪ್ಪತ್ತೈದು ವರ್ಷಗಳಿಂದ ಪ್ರಮೋಷನ್ ಸಿಗದೆ ಬೇಸರಗೊಂಡಿದ್ದ ಕುಕ್ಕುಟೇಶ್ವರಸ್ವಾಮಿ ಹೇಳಿದನು.

'ನಮಗೆ ತಿಳಿದಿರುವ ವಿಷಯ ಮಾತ್ರ ಮಾತಾಡಬೇಕು. ಈ ಡಿಪಾರ್ಟ್‌ಮೆಂಟ್‌ನಲ್ಲಿ